ಗಾಬರಿಗೊಂಡಿದ್ದ ಮೊದೀನ್ ನಮಸ್ಕಾರ ಮಾಡಿ ಅವರೆದುರು ಕೂತ. 'ನಿಮ್ಮ ಬಗ್ಗೆ, ನಿಮ್ಮ ತಂದೆಯವರ ಬಗ್ಗೆ ಊರ ಜನರಿಗೆ ಇರುವ ಗೌರವಾದರಗಳ ಬಗ್ಗೆ ಶೆಟ್ಟರು ಹೇಳಿದ್ದಾರೆ. ದೊಡ್ಡವರೇ ನಿಮ್ಮನ್ನು ನೋಡಬೇಕು ಅಂತಿದ್ದರು. ಅವರು ಈಚೆಗೆ ಮಠದಿಂದ ಹೊರಬರಲ್ಲ. ವಯಸ್ಸಾಯ್ತಲ್ಲ... ಎಲ್ಲ ಜವಾಬ್ದಾರಿ ನಮ್ಮ ಮೇಲಿದೆ' ಎನ್ನುತ್ತ ಅವನ ಮುಖ ನೋಡಿದರು.

'ದೊಡ್ಡವರಿಗೆ ಈ ಊರಲ್ಲೊಂದು ಇಂಗ್ಲಿಷ್ ಸ್ಕೂಲು ತೆರೆಯಬೇಕು ಅಂತ ಮನಸ್ಸಿದೆ. ಬೆಂಗಳೂರು, ಮೈಸೂರುಗಳಲ್ಲಿರೊ ಪಬ್ಲಿಕ್ ಸ್ಕೂಲ್‌ನಂತದ್ದು. ಹತ್ತು ಎಕರೆಯಾದರೂ ಬೇಕು ಅದಕ್ಕೆ. ನಿಮಗೇ ಗೊತ್ತಲ್ಲ ಹೊಸಳ್ಳಿಯಲ್ಲಿ ಭೂಮಿಗೆ ಬರ. ಗೋಮಾಳವನ್ನು ಲೀಸ್‌ಗೆ ಕೊಡಿ ಅಂತ ನಾವು ಸರ್ಕಾರವನ್ನು ಕೇಳಿದ್ದೀವಿ. ಊರವರು ಒಪ್ಪಿದರೆ ಕೊಡುವುದಾಗಿ ಸಿಎಂ ಸಾಹೇಬರು ಹೇಳಿದ್ದಾರೆ! ಗೋಮಾಳದ ಪಕ್ಕ ನಿಮ್ಮದು ಎರಡಕರೆ ಜಮೀನಿದೆ ಅಂತ ಗೊತ್ತಾಯಿತು. ನೀವು ಅದನ್ನು ಮಠಕ್ಕೆ ಕೊಡಬೇಕು ಅಂತ ನಮ್ಮ ಬಿನ್ನಹ. ನೀವು ಪುಕ್ಕಟೆ ಕೊಡಬೇಕಿಲ್ಲ. ಊರಲ್ಲಿ ಭೂಮಿಗೆ ಏನು ಬೆಲೆ ಇದೆಯೋ ಅದನ್ನು ಮಠ ಕೊಡುತ್ತೆ' ಅನ್ನುತ್ತ ಮೊದೀನ್ ಮುಖ ನೋಡಿದರು.

ಏನು ಉತ್ತರ ಹೇಳಬೇಕು ಅನ್ನುವುದು ಮೊದೀನ್‌ಗೆ ಗೊತ್ತಾಗಲಿಲ್ಲ. ಒಂದೆರಡು ಕ್ಷಣ ಸಾವರಿಸಿಕೊಂಡು, 'ಹೊಲದಲ್ಲಿ ನಮ್ಮ ಅಪ್ಪ, ಅಮ್ಮನ ಸಮಾಧಿಗಳಿವೆ. ನನ್ನ ಪಾಲಿಗೆ ಬಂದಿರೋದು ಮೂವತ್ತೇಳು ಗುಂಟೆ. ಉಳಿದದ್ದು ನಮ್ಮ ಚಿಕ್ಕಪ್ಪನ ಮಗನ ಹೆಸರಲ್ಲಿದೆ. ಅವನು ದುರ್ಗದಲ್ಲಿದ್ದಾನೆ. ಅವನ ಹೊಲದಲ್ಲಿ ನಮ್ಮ ಚಿಕ್ಕಪ್ಪ, ಚಿಕ್ಕಮ್ಮರ ಸಮಾಧಿಗಳಿವೆ' ಎನ್ನುತ್ತ ಸ್ವಾಮಿಗಳ ಮುಖ ನೋಡಿದ.

ಈ ಸಾಬು ಬುದ್ಧಿವಂತ ಅಂತ ಸ್ವಾಮಿಗಳು ಮನಸ್ಸಿನಲ್ಲೇ ಅಂದುಕೊಂಡರು. ಜಮೀನಿನ ಮೇಲೆ ಯಾರ ಕಣ್ಣೂ ಬೀಳಬಾರದು ಅಂತ ಅಪ್ಪ ಅಮ್ಮಂದಿರನ್ನು ತಂತಮ್ಮ ಹೊಲಗಳಲ್ಲಿ ಮಣ್ಣು ಮಾಡಿರುವ ಅಣ್ಣ ತಮ್ಮಂದಿರ ದೂರದೃಷ್ಟಿ ಅವರಿಗೆ ಇಷ್ಟವಾಯಿತು. ಸ್ವಲ್ಪ ಹೊತ್ತು ಸುಮ್ಮನಿದ್ದು,

